ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2019-20 ದಿನಾಂಕ: 17-10-2019

## ಪತ್ರಿಕಾ ಆಮಂತ್ರಣ

1. ಸರ್ಕಾರದಿಂದ ವಿವಿಧ ಅಕಾಡೆಮಿ ಮತ್ತು ಪ್ರಾಧಿಕಾರಗಳಿಗೆ ಹೊಸದಾಗಿ ನೇಮಕ ಮಾಡಲಾದ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸ್ವಾಗತ ಮತ್ತು ಪರಿಚಯ ಕಾರ್ಯಕ್ರಮ :

ಅಧ್ಯಕ್ಷತೆ :

ಶ್ರೀ ಸಿ .ಟಿ. ರವಿ,
ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು

ದಿನಾಂಕ : 18-10-2019, ಶುಕ್ರವಾರ ಸಮಯ: ಬೆಳಿಗ್ಗೆ 11-30

## ಪತ್ರಿಕಾ ಪ್ರಕಟಣೆ

### ಸಚಿವರ ಪ್ರವಾಸ

ಬೆಂಗಳೂರು, ಅಕ್ಟೋಬರ್ 17, (ಕರ್ನಾಟಕ ವಾರ್ತೆ)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವ ಶ್ರೀ ಎಸ್. ಸುರೇಶ್‌ಕುಮಾರ್ ಅವರು ಅಕ್ಟೋಬರ್ 18 ರಿಂದ 19 ರವರೆಗೆ ತುಮಕೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು, ಅಕ್ಟೋಬರ್ 19 ರಂದೇ ನಗರಕ್ಕೆ ಹಿಂತಿರುಗಲಿದ್ದಾರೆ.

## ಸಚಿವರ ಪ್ರವಾಸ

**ಬೆಂಗಳೂರು, ಅಕ್ಟೋಬರ್ 17, (ಕರ್ನಾಟಕ ವಾರ್ತೆ)**

**ಕಂದಾಯ ಮತ್ತು ಪೌರಾಡಳಿತ ಸಚಿವರು ಹಾಗೂ ಬೆಂಗಳೂರು ಗ್ರಾಮಾಂತರ ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಆರ್. ಅಶೋಕ್ ಅವರು ಅಕ್ಟೋಬರ್ 19 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು, ಅಂದೇ ರಾತ್ರಿ ನಗರಕ್ಕೆ ಹಿಂತಿರುಗಲಿದ್ದಾರೆ.**

## ಸಚಿವರ ಪ್ರವಾಸ

**ಬೆಂಗಳೂರು, ಅಕ್ಟೋಬರ್ 17, (ಕರ್ನಾಟಕ ವಾರ್ತೆ)**

**ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಸಾರ್ವಜನಿಕ ಉದ್ದಿಮೆ ಸಚಿವರು ಹಾಗೂ ಬೆಳಗಾವಿ ಮತ್ತು ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಶ್ರೀ ಜಗದೀಶ ಶೆಟ್ಟರ ಅವರು 18 ರಂದು ಬೆಳಗಾವಿ ಹಾಗೂ ಹುಬ್ಬಳ್ಳಿಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ.**

## ಜನಗಣತಿ ಪೂರ್ವಭಾವಿ ಸಭೆ

**ಬೆಂಗಳೂರು, ಅಕ್ಟೋಬರ್ 17, (ಕರ್ನಾಟಕ ವಾರ್ತೆ)**

**2021 ರಂದು ನಡೆಯುವ ಜನಗಣತಿಯನ್ನು ಸಮರ್ಪಕವಾಗಿ ನಡೆಸುವ ಸಲುವಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ವಿಧಾನಸೌಧದಲ್ಲಿ ಪೂರ್ವಭಾವಿ ಸಭೆ ನಡೆಯಿತು.**

**ಈ ಸಲುವಾಗಿ ರಾಜ್ಯಮಟ್ಟದ ಜನಗಣತಿ ಸಮನ್ವಯ ಸಮಿತಿಯನ್ನು ರಚಿಸಲಾಗಿದ್ದು, ಅದಕ್ಕೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಅಧ್ಯಕ್ಷರಾಗಿರುತ್ತಾರೆ.**

**ಸಭೆಯಲ್ಲಿ ಜನಗಣತಿಯ ಐತಿಹಾಸಿಕ ಹಾಗೂ ಇತರ ಮಹತ್ವದ ವಿಷಯಗಳ ಕುರಿತು ಜನಗಣತಿ ಆಯುಕ್ತ ಡಾ ವಿವೇಕ್ ಜೋಷಿ ಅವರು ಪವರ್ ಪಾಯಿಂಟ್ ಪ್ರಸ್ತುತಪಡಿಸಿದರು. ಅಲ್ಲದೆ ಇದಕ್ಕಾಗಿ ತಯಾರಿಸಲಾದ ಮೊಬೈಲ್ ಆಪ್ ಬಗ್ಗೆ ಸಹ ಪರಿಚಯಿಸಿದರು. ಜನಗಣತಿಯನ್ನು ಯಶಸ್ವಿಯಾಗಿ ನಡೆಸಲು ಸರ್ಕಾರ ಸಂಪೂರ್ಣ ಬೆಂಬಲ ನೀಡುತ್ತದೆ ಎಂದು ಮುಖ್ಯ ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು.**

## ಸಚಿವ ಸೋಮಣ್ಣ ಭೇಟಿ ಮಾಡಿದ ನೆದರ್‌ಲ್ಯಾಂಡ್ ನಿಯೋಗ :

**ಅಕ್ಟೋಬರ್ 17, 2019, ಬೆಂಗಳೂರು:** ನೆದರ್‌ಲ್ಯಾಂಡಿನ ಕೃಷಿ, ಪ್ರಕೃತಿ ಮತ್ತು ಆಹಾರ ಗುಣಮಟ್ಟ ಸಚಿವರಾದ ಮಿ: ಮಾರ್ರೋಲೈನ್ ಸೋನೇಮಾರವರ ನೇತೃತ್ವದ ಅಧಿಕೃತ ನಿಯೋಗ ಇಂದು ವಿಕಾಸಸೌಧದಲ್ಲಿ ವಸತಿ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರನ್ನು ಭೇಟಿ ಮಾಡಿತು.

ನೆದರ್‌ಲ್ಯಾಂಡಿನ ನಿಯೋಗವನ್ನು ಸ್ವಾಗತಿಸಿದ ಸಚಿವ ವಿ.ಸೋಮಣ್ಣ, ಕರ್ನಾಟಕವು ತೋಟಗಾರಿಕೆ ಅಭಿವೃದ್ಧಿಯಲ್ಲಿ ಇಡೀ ರಾಷ್ಟ್ರದಲ್ಲಿಯೇ ಮುಂಚೂಣಿ ರಾಜ್ಯಗಳ ಪೈಕಿ ಒಂದಾಗಿರುವುದನ್ನು, ತೋಟಗಾರಿಕೆ ವಿಸ್ತೀರ್ಣದಲ್ಲಿ ರಾಜ್ಯವು 2ನೇ ಸ್ಥಾನದಲ್ಲಿರುವುದನ್ನು ಹಾಗೂ ತೋಟಗಾರಿಕೆ ಬೆಳೆಗಳಲ್ಲಿ ರಾಜ್ಯವು ಸಾಧಿಸಿರುವ ಪ್ರಗತಿಗಳನ್ನು ನಿಯೋಗಕ್ಕೆ ವಿವರಿಸಿದರು.

ಮಹಾರಾಷ್ಟ್ರದ ಬಾರಾಮತಿಯಲ್ಲಿ ನೆದರ್‌ಲ್ಯಾಂಡ್ ಸರ್ಕಾರದ ಸಹಯೋಗದೊಂದಿಗೆ ಕಳೆದ ವರ್ಷ ಸ್ಥಾಪಿಸಿರುವ Centre of Excellence ಉತ್ತಮವಾಗಿ ರೈತಸ್ನೇಹಿಯಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ತಿಳಿಸಿದ ನೆದರ್‌ಲ್ಯಾಂಡಿನ ಕೃಷಿ ಸಚಿವರು, ಇದೇ ಮಾದರಿಯಲ್ಲಿ ಕರ್ನಾಟಕದಲ್ಲಿಯೂ ನೆದರ್‌ಲ್ಯಾಂಡ್ ಸಹಯೋಗದೊಂದಿಗೆ ಇಂತಹ ಸಂಸ್ಥೆಗಳನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾಪಿಸಿದರು.

ಇದೇ ಸಂದರ್ಭದಲ್ಲಿ ನೆದರ್‌ಲ್ಯಾಂಡ್ ದೇಶವು ಕೃಷಿ ಹಾಗೂ ಪಶುಸಂಗೋಪನೆ ಕ್ಷೇತ್ರದಲ್ಲಿ ತಾಂತ್ರಿಕವಾಗಿ ಸಾಧಿಸಿರುವ ಪ್ರಗತಿಯನ್ನು ಪರಿಗಣಿಸಿ ತೋಟಗಾರಿಕೆ, ಹೈನುಗಾರಿಕೆ ಹಾಗೂ ಆಹಾರ ಸಂಸ್ಕರಣೆ ಕ್ಷೇತ್ರದಲ್ಲಿ ಪರಸ್ಪರ ತಂತ್ರಜ್ಞಾನ ವಿನಿಮಯ, ಉತ್ಕೃಷ್ಟತಾ ಕೇಂದ್ರಗಳ ನವೀನ ವಿನ್ಯಾಸ, ಪಾಲುದಾರರ ನಡುವಿನ ಬಡಂಬಡಿಕೆ, ಇತ್ಯಾದಿ, ಪೂರಕ ಅಂಶಗಳ ಬಗ್ಗೆ ಚರ್ಚಿಸಿರುವುದೇ ಅಲ್ಲದೆ ಕರ್ನಾಟಕದಿಂದ ನೆದರ್‌ಲ್ಯಾಂಡ್ ದೇಶಕ್ಕೆ ಅಧಿಕೃತ ನಿಯೋಗ ಕಳುಹಿಸುವ ಮತ್ತು ಕರ್ನಾಟಕದಲ್ಲಿ Centre of Excellence ಸ್ಥಾಪಿಸಲು ಮಾದರಿಯಾಗಿ ಒಂದು ಜಿಲ್ಲೆಯನ್ನು ಪರಿಗಣಿಸಿ ಅಭಿವೃದ್ಧಿಪಡಿಸುವ ಬಗ್ಗೆಯೂ ಸಹ ಚರ್ಚಿಸಲಾಯಿತು.